<u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

**<u>ಸಿ.ಸಿ. ಸಂಖ್ಯೆ: 67/2019</u>**

ಸಾಕ್ಷಿಯನ್ನು ದಿಃ **08.12.2022** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು**.**

| | | | |
|---|---|---|---|
| ಹೆಸರು | ರವಿ | ಸಿಡಬ್ಲ್ಯೂ:2 | ಪಿಡಬ್ಲ್ಯೂ:2 |
| ತಂದೆಯ ಹೆಸರು | ನಾರಾಯಣ | | |
| ವಯಸ್ಸು | 45 ವರ್ಷ | | |
| ಕೆಲಸ | ಬಾರ್ ಅಂಗಡಿಯಲ್ಲಿ ಕೆಲಸ | | |
| ವಾಸಸ್ಥಳ | ಹುಣಸೂರು | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ನಿಪಿ. 2 ರ ಸ್ಥಳ ಮಹಜರ್ ನಲ್ಲಿರುವ ಸಾಕ್ಷಿಯು ತನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 2(ಬಿ) ಎಂದು ಗುರುಸಲಾಯಿತು. ಮಾರ್ಚ್ 2018 ರಲಿಲ ಸದರಿ ಸಹಿಯನ್ನು ಮಾಡಿದ್ದು, ತಾರೀಖು ಎಷ್ಟು ಎಂದು ನೆನಪಿಲ್ಲ. ಇದನ್ನು ಪೋಸ್ಟ್ ಅಫೀಸು ಬಳಿ ಇರುವ ನಮ್ಮ ಅಂಗಡಿ ಹತ್ತಿರ ಮಾಡಿರುತ್ತಾರೆ. ಅಂಗಡಿಯಲ್ಲಿ ಕಳ್ಳತನವಾಗಿದ್ದ ಬಗ್ಗೆ ಪೊಲೀಸರು ಸಹಿ ಮಾಡಿ ಎಂದು ಹೇಳಿದ ಕಾರಣ ನಿಪಿ. 2 ಕ್ಕೆ ಸಹಿ ಮಾಡಿರುತ್ತೇನೆ. ಸಹಿಯನ್ನು 4.30 ರಿಂದ 4.45 ರ ವರೆಗೆ ಮಾಡಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ನಮ್ಮ ಅಂಗಡಿಯ ಮಾಲಿಕರಾದ ಚಾಸಾ 1 ಮತ್ತು

3 ರವರು ಇರುತ್ತಾರೆ. ಆ ಸಮಯದಲ್ಲಿ ಪೊಲಿಸರು ಮಹಜರ್ ಮಾಡಿರುತ್ತಾರೆ. ನಿಪಿ. 3 ರ ಅಮಾನತ್ತು ಮಹಜರ್ ನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ನಿಪಿ. 3(ಬಿ) ಗುರುತಿಸಲಾಯಿತು. ಈ ಅಮಾನತ್ತು ಮಹಜರ್ ಅನ್ನು ನಮ್ಮ ಅಗಂಡಿಯಲ್ಲಿ 4.30 ರಿಂದ 5 ಗಂಟೆ ಮಾಡಿರುತ್ತಾರೆ. ಈ ಅಮಾನತ್ತು ಮಹಜರ್ ಮಾಡಿರುವಾಗ ನಮ್ಮ ಅಂಗಡಿಯ ಮಾಲೀಕರಾದ ಚಾಸಾ 1 ಮತ್ತು 3 ರವರು ನನ್ನ ಜೊತೆ ಇರುತ್ತಾರೆ. ಏನು ಅಮಾನತ್ತು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಈ ಪ್ರಕರಣದ ಬಗ್ಗೆ ಮತ್ತೇನು ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀಸವಾಲು ಸಸಅ ರವರಿಂದಃ–**

ನಮ್ಮ ದಿಃ 31.05.2018 ರಂದು ನಮ್ಮ ಅಗಂಡಿಯಲ್ಲಿ ಕಳ್ಳತನವಾಗಿ ವಸಸುಗಳನ್ನು ಚೆಲ್ಲಾಪಿಲ್ಲಿ ಯಾಗಿ ಪೊಲಿಸೀರು ಅಲ್ಲಿ ಬಂದು ಸ್ಥಳ ಮಹಜರ್ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸ್ಥಳ ಮಹಜರ್ ಮಾಡಿದ ಸಮಯ ಸಂಜೆ 5 ರಿಂದ 6 ಗಂಟೆ ಎಂದರೆ ಸರಿ.ಆ ಸಮಯದಲ್ಲಿ ಚಾಸಾ 1 ಮತ್ತು 3 ರವರು ನನ್ನೊಂದಿಗೆ ಹಾಜರಿದ್ದು, ನಿಪಿ. 2 ರ ಸ್ಥಳ ಮಹಜರ್ ಗೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ಆ ದಿನ ಪೊಲೀಸರು ನಮ್ಮ ಅಂಗಡಿ ಬಳಿ ಬಂದು ಮಹಜರ್

ಮಾಡಿದ ವಿಚಾರವೆಲ್ಲಾ ತಿಳಿದಿದೆ ಎಂದರೆ ಸರಿಯಲ್ಲ. ಆಗ ಪೊಲೀಸರು ನಮ್ಮ ಅಂಗಡಿಯ ಸಿಸಿ ಕ್ಯಾಮೆರಾದ ಡಿ.ವಿ.ಡಿಯನ್ನು ಕೂಡ ಅಮಾನತ್ತು ಪಡಿಸಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಅಮಾನತ್ತು ಪಡಿಸಿಕೊಳ್ಳುವ ಸಮಯದಲ್ಲಿ ಸ್ಥಳದಲ್ಲಿ ನನ್ನೊಂದಿಗೆ ಚಾಸಾ 1 ಮತ್ತು 3 ರವರು ಕೂಡ ಹಾಜರಿದ್ದರು ಎಂದರೆ ಸರಿ. ಪೊಲೀಸರು ಸ್ಥಳಕ್ಕೆ ಬಂದು ಸಿಸಿ ಟಿವಿಯ ಡಿ.ವಿ. ಡಿಯನ್ನು ನನ್ನ ಸಮ್ಮುಖದಲ್ಲಿ ಅಮಾನತ್ತು ಪಡಿಕೊಂಡಿರುವ ವಿಚಾರ ನನಗೆ ಗೊತ್ತಿದ್ದರೂ ನಾನು ಈಗ ಇಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಮಾನತ್ತು ಮಹಜರ್ ಬರೆದಿರುವ ವಿಚಾರ ಎಲ್ಲಾ ಗೊತ್ತಿದೆ ಎಂದರೆ ನನಗೆ ಗೊತ್ತಾಗುವುದಿಲ್ಲ. ಪೊಲೀಸರು ಸ್ಥಳ ಮಹಜರ್ ಮತ್ತು ಅಮಾನತ್ತು ಮಹಜರ್ ನ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ನಾನು ಆರೋಪಿಗಳಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು ಃ 1 ನೇ ಆರೋಪಿ ಪರ ಶ್ರಿ ಎಂ.ಈ.ಎಂ ವಕೀಲರಿಂದ**

ನಾನು ಪೊಲೀಸರ ಮುಂದೆ ರವಿ ಬಿನ್ ಲೇಟ್ ನಾರಾಯಣರಾವ್ ಪಾತ್ರೆ ವ್ಯಾಪಾರ ಎಂದು ನಾನು ಬರೆಸಿರುವುದಿಲ್ಲ. ಅದೆ ರೀತಿ ನಾನು ಚಾಸಾ 1 ರ ಬಾರಿನಲ್ಲಿ ಕೆಲಸ ಮಾಡುತ್ತೇನೆ ಎಂದು ಕೂಡ ಬರೆಸಿರುವುದಿಲ್ಲ. ಪೊಲೀಸರು ಮಹಜರ್ ಮಾಡಲು ಬಂದಿದ್ದರು ಎದು ಹೇಳಿದ್ದು, ಆ ದಿನ ಯಾವ ದಿನಾಂಕವಾಗಿತ್ತು ಎಂದು ನನೆಗ ನೆನಪಿಲ್ಲ ಎಂದರೆ ಸರಿ. ಪೊಲಿಸೀರು ಮಹಜರ್ ಗೆ ಬರಬೇಕು ಎಂದು ನನಗೆ ನೋಟೀಸು ಕೊಟ್ಟಿರಲಿಲ್ಲ ಎಂದರೆ ಸರಿ. ಮಹಜರ್ ನಲ್ಲಿ ಎನು ಬರೆದಿದ್ದಾರೆ ಎಂಬ ವಿಚಾರ ಕೂಡ ಗೊತ್ತಿಲ್ಲ ಎಂದರೆಸ ರಿ. ನನ್ನ ಮಾಲೀಕರಾದ ಚಾಸಾ 1 ರವರು ಸಹಿ ಮಾಡಿದ್ದಾರೆ ಎಂಬ ಕಾರಣಕ್ಕೆ ನಾನು ಕೂಡ ಮಹಜರ್ ಗೆ ಸಹಿ ಮಾಡಿದ್ದೇನೆ ಎಂದರೆ ಸರಿ.

ಸಹಿ ಮಾಡಿರುವುದನ್ನು ಹೊರತು ಪಡಿಸಿದರೆ ಈ ಪ್ರಕರಣದ ಬೇರೆ ಯಾವುದೆ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಸಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.